4. ನಿಲುವಳಿ ಸೂಚನೆ ಮಂಡಿಸಲು ಅನುಮತಿ ಕೋರಿಕೆ.

ವಿಷಯ : ಗುಟ್ಕಾ ನಿಷೇಧ ಆದೇಶವನ್ನು ರದ್ದುಗೊಳಿಸುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ : ಸರ್, ನಾನು ನಿಲುವಳಿ ಸೂಚನೆಯನ್ನು ಮಂಡನೆ ಮಾಡಿದ್ದೇನೆ, ಅದನ್ನು ನಾನು ಮೆನ್ಷನ್ ಮಾಡುತ್ತೇನೆ, ಆಮೇಲೆ ಅದನ್ನು ಅಕ್ಸೆಪ್ಟ್ ಮಾಡುವುದು ಬಿಡುವುದು ತಮಗೆ ಬಿಟ್ಟಂಥದ್ದು ಚರ್ಚೆಗೆ ಅವಕಾಶ ಕೊಡಬೇಕೋ ಬೇಡವೋ ಎನ್ನುವುದು ತಮಗೆ ಬಿಟ್ಟಂಥ ವಿಚಾರ ನಾನೂ ಆ ಸ್ಥಾನದಲ್ಲಿದ್ದು ಇಲ್ಲಿ preliminary submission ಮಾಡುವುದಕ್ಕೆ ಅಲೋ ಮಾಡಿದ್ದೇನೆ. ನಮ್ಮ ಪ್ರತಿಪಕ್ಷದ ನಾಯಕರಾಗಿದ್ದಂಥವರು ಎಲ್ಲರೂ ಈ ಬಗ್ಗೆ ಡಿಸ್ಕಷನ್ ಮಾಡಿದ್ದಾರೆ. ನಿಲುವಳಿ ಸೂಚನೆ ತಂದಂಥ ಸಂದರ್ಭದಲ್ಲಿ ಇಡೀ ದಿವಸ ಡಿಸ್ಕಷನ್ ಮಾಡಿದ್ದಾರೆ. ದಯವಿಟ್ಟು, ಇದು ಬಹಳ ಪ್ರಮುಖವಾದ ವಿಚಾರ.

(ಗೊಂದಲ)

ಶ್ರೀ ಪ್ರಕಾಶ್ ಹುಕ್ಕೇರಿ : ಅಧ್ಯಕ್ಷರೆ, ಅಜೆಂಡಾ ಪ್ರಕಾರ ಹೋಗಿ, ಹೊಸ ಪದ್ಧತಿ ಮಾಡುವುದು ಬೇಡ, ತಮ್ಮಲ್ಲಿ ಕಳಕಳಿಯಿಂದ ವಿನಂತಿ ಮಾಡುತ್ತೇವೆ. ತಾವೇನೂ ಅಜೆಂಡಾ ಕೊಟ್ಟಿದ್ದೀರಿ, ಆ ಪ್ರಕಾರ ತೆಗೆದುಕೊಳ್ಳಿ ಎಂದು ನಾವು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇವೆ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ತಾವು [ಟಿ.ಬಿ.ಜಯಚಂದ್ರ] ಇಲ್ಲಿ ಉಪ ನಾಯಕರಾಗಿ ಕೆಲಸ ಮಾಡಿದ್ದೀರಿ ತಾವು ಇಲ್ಲಿ ಮೆನ್ಷನ್ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ? ನೀವು ಪ್ರತಿ ದಿವಸವೂ ನಿಲುವಳಿ ಸೂಚನೆಗಳನ್ನು ತರುತ್ತಿದ್ದೀರಿ.

ಅಧ್ಯಕ್ಷರು : ನೀವು ನೀವೇ ಪರಸ್ಪರ ಚರ್ಚೆ ಮಾಡುವುದು ಬೇಡ. ಈ ಕಡೆ ನೋಡಿಕೊಂಡು ಚರ್ಚೆ ಮಾಡಿ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಇವತ್ತು ಈ ಸದನದಲ್ಲಿ ಈ ರೀತಿ ನಿಲುವಳಿ ಸೂಚನೆ ತಂದಂಥ ಸಂದರ್ಭದಲ್ಲಿ, ನಾನು preliminary submission ಮಾಡುವುದಕ್ಕೆ ಮೊದಲೇ ಈ ರೀತಿ ಕಾನೂನು ಸಚಿವರು

ಅಬ್ಸ್ಟ್ಷನ್ ಮಾಡುತ್ತಾರೆ, ಬಹಳ ಹುರುಪಿನಲ್ಲಿದ್ದಾರೆ, ಈ ಹಿಂದೆ ಇಲ್ಲಿ ಜಯಚಂದ್ರ ಅವರು ತಾಸುಗಟ್ಟಲೆ ಮಾತನಾಡಿದ್ದಾರೆ, ನಾವು ನೋಡಿದ್ದೇವಲ್ಲ.

(ಗೊಂದಲ)

ಇವತ್ತು ಹೊಸ ಸರ್ಕಾರ ಬಂದ ಮೇಲೆ, ಮಾನ್ಯ ಸಿದ್ದರಾಮಯ್ಯನವರು ಮುಖ್ಯಮಂತ್ರಿಗಳಾಗಿ. ಅಧಿಕಾರವನ್ನು ತೆಗೆದುಕೊಂಡ ಮೇಲೆ, ಬಹಳಷ್ಟು ನಿರ್ಣಯಗಳನ್ನು ತೆಗೆದುಕೊಂಡರು.

ಅಧ್ಯಕ್ಷರು : ಅದೆಲ್ಲಾ ಬೇಡ, ಈ ಬಗ್ಗೆ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಅದರಲ್ಲಿ ಇದೂ ಒಂದು ಗುಟ್ಕಾ ನಿಷೇಧದ ಬಗ್ಗೆ ನಿರ್ಣಯ ಕೈಗೊಂಡಿದ್ದಾರೆ. ಈಗಾಗಲೇ ಬೇರೆ ರಾಜ್ಯಗಳಲ್ಲಿ ನಿಷೇಧವಿದೆ.

ಶ್ರೀ ಬಸವರಾಜ ರಾಯರೆಡ್ಡಿ : ಸರ್ ನನ್ನದು ಪಾಯಿಂಟ್ ಆಫ್ ಆರ್ಡರ್.

ಶ್ರೀ ಜಗದೀಶ್ ಶೆಟ್ಟರ್ : ಸರ್, ಏನು ಪಾಯಿಂಟ್ ಆಫ್ ಆರ್ಡರ್ ಎಂದು ನನಗೆ ಅರ್ಥವಾಗುತ್ತಿಲ್ಲ!

(ಗೊಂದಲ)

ಇವರಿಗೆ ಅಡಿಕೆ ಬೆಳೆಗಾರರ ಹಿತಾಸಕ್ತಿ ಕಾಪಾಡುವುದಕ್ಕೆ ಇಷ್ಟ ಇಲ್ಲ. ಇವರು ಅಡಿಕೆ ಬೆಳೆಗಾರರ ಬಗ್ಗೆ ಚರ್ಚೆ ಮಾಡುವುದಕ್ಕೆ ಇವರು ಅವಕಾಶ ಕೊಡುತ್ತಿಲ್ಲ. ಬಹುಶಃ ಯಾವ ರೀತಿ dictatorship ಇಲ್ಲಿ ನಡೆದಿದೆ ಎಂದು ತಾವು ಅರ್ಥ ಮಾಡಿಕೊಳ್ಳಬೇಕು.

ಅಧ್ಯಕ್ಷರು : ದಯವಿಟ್ಟು ಸಹಕರಿಸಿ.

ಶ್ರೀ ಜಗದೀಶ್ ಶೆಟ್ಟರ್ : ಚರ್ಚೆ ಮಾಡುವುದಕ್ಕೆ ಅವಕಾಶ ಕೊಡುವುದಿಲ್ಲವೆಂದರೆ ಹೇಗೆ?

ಅಧ್ಯಕ್ಷರು : ಮಾನ್ಯ ಜಗದೀಶ್ ಶೆಟ್ಟರ್‌ರವರೇ, ದಯವಿಟ್ಟು ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿ ಕೊಡುವ ಜವಾಬ್ದಾರಿ ನನ್ನ ಮೇಲೆ ಇದೆ. ನೀವು ಅವರ ಮೇಲೆ ಹಾಕಬೇಡಿ. ಅವರೇನೋ point of order ಹೇಳುತ್ತಿದ್ದಾರೆ. ದಯಮಾಡಿ ಒಂದು ನಿಮಿಷದಲ್ಲಿ ಅದೇನು ಎಂದು ಕೇಳಿ.

ಶ್ರೀ ಬಸವರಾಜ ರಾಯರೆಡ್ಡಿ : (ಯಲಬುರ್ಗಾ) ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಶೂನ್ಯ ವೇಳೆಯಲ್ಲಿ ಏನು ವಿಷಯ ಪ್ರಸ್ತಾಪ ಮಾಡಿದ್ದಾರೆ. . .

ಶ್ರೀ ಜಗದೀಶ್ ಶೆಟ್ಟರ್ : ಶೂನ್ಯ ವೇಳೆ ಅಲ್ಲರೀ, ನಿಲುವಳಿ ಸೂಚನೆ ಮೇಲೆ ಪ್ರಸ್ತಾಪ ಮಾಡಿದ್ದೇವೆ. ನಾವು ಏನು ನೋಟಿಸ್ ಕೊಟ್ಟಿದ್ದೇವೆಂದು

ತಿಳಿದುಕೊಳ್ಳಿ. ನೀವು ವಷಯ ತಿಳಿದುಕೊಂಡು ಮಾತನಾಡಿ. ಅವರಿಗೆ ನಾವು ಕೊಟ್ಟಿರುವ ನೋಟಿಸ್ ಕಾಪಿ ಕೊಡಿ.

(ಗೊಂದಲ)

ಶ್ರೀ ಆರ್.ಅಶೋಕ : ಇದು ಶೂನ್ಯ ವೇಳೆ ಅಲ್ಲ, ಅವರಿಗೆ ಒಂದು ಕಾಪಿ ಕಳುಹಿಸಿ ಕೊಡಿ.

ಶ್ರೀ ಬಸವರಾಜ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, ಇದನ್ನು ಅವರು ರಾಜ್ಯಪಾಲರ ಭಾಷಣದ ಮೇಲೆ ಮಾತನಾಡಬಹದು.

ಅಧ್ಯಕ್ಷರು : ನಾನು ಅವರಿಗೆ ಹೇಳುತ್ತೇನೆ. ನಿಮ್ಮದು point of order ಅಲ್ಲ ದಯವಿಟ್ಟು ಕುಳಿತುಕೊಳ್ಳಿ. ಮಾನ್ಯ ಜಗದೀಶ್ ಶೆಟ್ಟರ್‌ರವರೇ ನೀವು ಸಂಕ್ಷಿಪ್ತವಾಗಿ ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ಗುಟ್ಕಾ ನಿಷೇಧ ಮಾಡುವುದಕ್ಕೆ ಯಾರೂ ಯಾರೂ ವಿರೋಧ ಮಾಡುವುದಿಲ್ಲ. ಆದರೆ ಇವತ್ತಿನದಿವಸ ನಮ್ಮ ರಾಜ್ಯದಲ್ಲಿ ನಮ್ಮ ಅಡಿಕೆ ಬೆಳೆಗಾರರು ಹಾಗೂ ಅವರ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ಅರ್ಥ ಮಾಡಿಕೊಳ್ಳಬೇಕು. ಗುಟ್ಕಾ ನಿಷೇಧ ಮಾಡಿ 30ನೇ ತಾರೀಕು ರಾಜ್ಯ ಸರ್ಕಾರ Notification ಹೊರಡಿಸಿದೆ. 29ನೇ ತಾರೀಕಿನಿಂದ ಅಧಿವೇಶನ ಪ್ರಾರಂಭವಾಗೆದೆ. 30ನೇ ತಾರೀಖು ನೋಟಿಫಿಕೇಷನ್ ಹೊರಡಿಸುತ್ತಾರೆ. ಮಾನ್ಯ ಸಿದ್ದರಾಮಯ್ಯನವರು ಇರಬಹುದು ಮಾನ್ಯ ಜಯಚಂದ್ರರವರು ಇರಬಹುದು, ಇವರು ಬಹಳ ವರ್ಷಗಳಿಂದ ಸರ್ಕಾರದಲ್ಲಿ ಅಥವಾ ಪ್ರತಿಪಕ್ಷದಲ್ಲಿ ಇದ್ದು ಕೆಲಸ ಮಾಡಿದಂಥವರು. ಬಹಳ ಅನುಭವ ಇದ್ದಂಥವರು. ಆದರೆ ಸದನ ನಡೆಯುವಂತಹ ಸಂದರ್ಭದಲ್ಲಿ ಈ ರೀತಿಯ ಯಾವುದೇ ಪ್ರಮುಖವಾದ policy ನಿರ್ಧಾರ ತೆಗೆದುಕೊಳ್ಳುವಂಥದ್ದು ಅದರ ಬಗ್ಗೆ ಘೋಷಣೆ ಮಾಡುವಂಥದ್ದನ್ನು ಸದನದಲ್ಲಿ ಘೋಷಣೆ ಮಾಡಬೇಕಾಗುತ್ತದೆ. ಕ್ಯಾಬಿನೆಟ್‌ನಲ್ಲಿರಬಹುದು ಅಥವಾ ಮಂತ್ರಿಗಳ ಇಲಾಖೆಗಳಲ್ಲಿ ಇರಬಹುದು, ಈ ರೀತಿ ಒಂದು ನಿರ್ಣಯವನ್ನು ಕೈಗೊಂಡಿದ್ದೇವೆ, ಅದನ್ನು ಈಗ ಘೋಷಣೆ ಮಾಡತ್ತೇವೆಂದು ಸದನದಲ್ಲಿ ಘೋಷಣೆ ಮಾಡಿದ್ದರೆ ಸರ್ಕಾರವೇ ಚರ್ಚೆ ಮಾಡುವುದಕ್ಕೆ ಅವಕಾಶವಿತ್ತು. ಆದರೆ ಅವರು ಮಾಡಲಿಲ್ಲ. ಈ ಒಂದು ಸಂಪ್ರದಾಯವನ್ನು ಈ ಸರ್ಕಾರದವರು ಮುರಿದು ಹಾಕಿದ್ದಾರೆ. ತಾವು ಬಹಳ ವರ್ಷಗಳ ಅನುಭವ ಇದ್ದಂತಹವರು.

ಅಧ್ಯಕ್ಷರು : Merit ಇದೆ. ಇದು ಬಹಳ ಪ್ರಮುಖವಾದ ವಿಷಯವೆಂದು ನನಗೂ ಅರ್ಥವಾಗಿದೆ. ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಮುಕ್ತವಾದ ಅವಕಾಶ ಮಾಡಿಕೊಡುತ್ತೇನೆ. ದಯವಿಟ್ಟು ಅದರಲ್ಲಿ ಅನುಮಾನ ಬೇಡ.

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, at least preliminary submission ಆದರೂ ಮಾಡುತ್ತೇನೆ. ಈ ರೀತಿ ಒಂದು ಸಂಪ್ರದಯವನ್ನು ಮುರಿದಂತಹ ಸರ್ಕಾರ ಇದು. ಯಾವುದೇ ಒಂದು ನೀತಿ ಅಥವಾ ಯಾವುದೇ policy matter ಇತ್ತು ಎಂದರೆ ಸದನ ನಡೆಯುವಂತಹ ಸಂದರ್ಭದಲ್ಲಿ declare ಮಾಡಬೇಕಾಗಿತ್ತು. ಆದರೆ ಮಾಡಲಿಲ್ಲ. ಇಷ್ಟು ಅನುಭವ ಇದ್ದಂಥವರು ಈ ತಪ್ಪನ್ನು ಮಾಡಿದ್ದಾರೆ. ಇವತ್ತು ಈ ಸದನಕ್ಕೆ ಹಾಗೂ ಸದನದ ಪರಂಪರೆಗೆ ಅಪಮಾನ ಮಾಡುವಂತಹ ಕೆಲಸವನ್ನು ಈ ಸರ್ಕಾರದವರು ಮಾಡಿದ್ದಾರೆ. ಇಡೀ ರಾಷ್ಟ್ರದ ಅಡಿಕೆ ಉತ್ಪಾದನೆಯಲ್ಲಿ ಶೇಕಡ 60% ರಷ್ಟು ನಮ್ಮ ರಾಜ್ಯದಲ್ಲಿ ಉತ್ಪಾದನೆ ಆಗುತ್ತದೆ. ಕೋಟ್ಯಾಂತರ ಜನ ಈ ಅಡಿಕೆ ಉತ್ಪನ್ನದ ಮೇಲೆ ಅವಲಂಬಿತರಾಗಿ ಬಹಳ ದೊಡ್ಡ ಪ್ರಮಾಣದಲ್ಲಿ ಅಡಿಕೆ ಬೆಳೆಯುತ್ತಾರೆ ಶಿವಮೊಗ್ಗ ಜಿಲ್ಲೆಯಲ್ಲಿಯೂ ಸಾಕಷ್ಟು ಜನ ಅಡಿಕೆ ಬೆಳೆಗಾರರಿದ್ದಾರೆ. ಈ ಒಂದು ಘೋಷಣೆ ಮಾಡುವ ಮುಂಚೆ ಅಡಿಕೆ ಬೆಳೆಗಾರರ ಪ್ರಮುಖರನ್ನು ಕರೆದು ಮಾತನಾಡಬೇಕಾಗಿತ್ತು. ಎಲ್ಲರನ್ನೂ ಕರೆದು ಮಾತನಾಡಿದರೂ ಅಡ್ಡಿ ಇಲ್ಲ. ಆ ಭಾಗದ ಜನ ಪ್ರತಿನಿಧಿಗಳನ್ನು ಕರೆದು ಒಂದು ಸಭೆ ಮಾಡಿ ಇದರ consequemce ಏನಾಗುತ್ತದೆ? ಆ ಅಡಿಕೆ ಬೆಳೆಗಾರರಿಗೆ ಏನು ತೊಂದರೆಯಾಗುತ್ತದೆ? ಈ ಗುಟ್ಕಾ ನಿಷೇಧ ಮಾಡುವುದರಿಂದ ಏನು ತೊಂದರೆಯಾಗುತ್ತದೆ? ಆ ತೊಂದರೆಯನ್ನು ನಿವಾರಣೆ ಮಾಡುವುದಕ್ಕೆ ಏನು ಮಾಡಬಹುದಾಗಿತ್ತು? ಅದಕ್ಕೆ ಏನು ಪರಿಹಾರ ಮಾಡಬಹುದಾಗಿತ್ತು? Alternative remedies ವಿಚಾರ ಮಾಡಬಹುದಾಗಿತ್ತು. ಅದು ಯಾವುದೂ ಮಾಡಲಾರದೆ ಅದೂ ಸದನ ನಡೆಯುವಂತಹ ಸಂದರ್ಭದಲ್ಲಿ ಏಕ ಪಕ್ಷೀಯವಾಗಿ ಒಂದು ಸರ್ವಾಧಿಕಾರಿ ರೀತಿಯಲ್ಲಿ ಗುಟ್ಕಾ ನಿಷೇಧವನ್ನು ಹೇರಿದರು. ಇದರಿಂದ ಇವತ್ತು ಲಕ್ಷಾಂತರ ಜನ ಅಡಿಕೆ ಬೆಳೆಗಾರರು ತೊಂದರೆಯಲ್ಲಿದ್ದಾರೆ. ಇಡೀ ವ್ಯವಸ್ಥೆಗೆ ಈ ಸರ್ಕಾರ ಕೊಡಲಿ ಪೆಟ್ಟನ್ನು ಹಾಕಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಇವತ್ತು ಅದರಿಂದ ಏನು ಪರಿಣಾಮ ಆಗಿದೆ? ಅಡಿಕೆ ಬೆಲೆ ಕಡಿಮೆ ಆಗುತ್ತಿದೆ. ಅದರ ಜೊತೆಗೆ ಅದರ ಮೇಲೆ ಅವಲಂಬಿತರಾದ ಕೋಟ್ಯಂತರ ಜನ ಇವತ್ತು ಬೀದಿಗೆ ಬೀಳುವಂತಹ ಪರಿಸ್ಥಿತಿ

ನಿರ್ಮಾಣವಾಗಿದೆ. ಗುಟ್ಕಾ ಅನುಭವ ನಮಗಂತೂ ಇಲ್ಲ. ಮಾರುಕಟ್ಟೆಯಲ್ಲಿ ನಾಲ್ಕೈದು ರೂಪಾಯಿ ಇದ್ದ ಗುಟ್ಕಾ 30 ರೂಪಾಯಿ ಆಗಿದೆ. ಇನ್ನೊಂದು ರೀತಿಯ exploitation ನಡೆಯುತ್ತಿದೆ. ಈ ಕಡೆ ಅಡಿಕೆ ದರ ಇಳಿದು ಅಡಿಕೆ ಬೆಳೆಯುವಂತಹ ರೈತರು ತೊಂದರೆಯಲ್ಲಿದ್ದಾರೆ. ಆ ಭಾಗದಿಂದ ಬಂದಂತಹ ಎರಡು-ಮೂರು ಜನ ಶಾಸಕರು ಅದರ ಬಗ್ಗೆ ಮಾತನಾಡುವವರಿದ್ದಾರೆ. ನಾನು ಹೆಚ್ಚಿಗೆ ಮಾತನಡುವುದಿಲ್ಲ. ಅದರ ಬಗ್ಗೆ ನಮ್ಮ ಮಾನ್ಯ ಸದಸ್ಯರುಗಳಾದ ಸಿ.ಟಿ. ರವಿ ಯವರು ಹಾಗೂ ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮಾತನಾಡುತ್ತಾರೆ ಇದರ ಬಗ್ಗೆ ವಿಸ್ತಾರವಾದ ಚರ್ಚೆಗೆ ತಾವು ಅವಕಾಶ ಮಾಡಿಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಇಲ್ಲಿಯೇ ಇದ್ದಾರೆ. 30ನೇ ತಾರೀಖು ತಾವೇನು ನೋಟಿಫಿಕೇಷನ್ ಹೊರಡಿಸಿದ್ದೀರಿ ಅದನ್ನು ತಕ್ಷಣವೇ held up ಮಾಡಿ. Supreme Court ಆಜ್ಞೆ ಇದೆ. ಹಲವಾರು writ petitions High court ನಲ್ಲಿ ಪೆಂಡಿಂಗ್ ಇವೆ. . Supreme Court ನಲ್ಲಿ pendifg ಇವೆ. Court ಆಜ್ಞೆ ಇರುವುದರಿಂದ ತಾವು ತಕ್ಷಣವೇ held up ಮಾಡಿ ಎಲ್ಲರ ಜೊತೆ ಸಮಾಲೋಚನೆ ಮಾಡಿ ಜನಪ್ರತಿನಿಧಿಗಳನ್ನು ಅಡಿಕೆ ಬೆಳೆಗಾರರ ಪ್ರಮುಖರನ್ನು ಕರೆದು ಒಂದು ಸಭೆ ಮಾಡಿ. ಇದರ ಬಗ್ಗೆ ಒಂದು ನಿರ್ಧಾರ ಮಾಡಿ alternative remedy ಕೊಡಿ. ಅದರ ಬಗ್ಗೆ ನಾನು ಇನ್ನೂ ಹೆಚ್ಚು ವಿವರವಾಗಿ ಮಾತನಾಡುವವನಿದ್ದೇನೆ. ದಯವಿಟ್ಟು ಈ ಚರ್ಚೆಗೆ ಅವಕಾಶ ಮಡಿ ಕೊಡಬೇಕೆಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ: ಮಾನ್ಯ ಅಧ್ಯಕ್ಷರೆ, ನಾವು ಒಂದೆರಡು ಮೂರು ಜನ ಪ್ರಸ್ತಾಪ ಮಾಡುವವರಿದ್ದೇವೆ.

ಅಧ್ಯಕ್ಷರು : ಇದು ಪೂರ್ಣ ಚರ್ಚೆ ಅಲ್ಲ, ಪೂರ್ವಭಾವಿ ಚರ್ಚೆ.

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) : ನಿಮ್ಮ ಸೂಚನೆ ಸರ್ಕಾರಕ್ಕೆ ಬಂದಿದೆ. Preliminary submission ಕೂಡ ಮಾಡಿದ್ದೀರಿ. ತಾವು ಮಾತನಾಡುವುದಕ್ಕೆ ನಾನು ಅಡ್ಡಿಪಡಿಸುತ್ತಿಲ್ಲ. ದಯಮಾಡಿ ತಾವು ಅರ್ಥ ಮಾಡಿಕೊಳ್ಳಿ. ಮಾನ್ಯ ಅಧ್ಯಕ್ಷರೆ, ಏನು ಮಾನ್ಯ ಜಗದೀಶ್ ಶೆಟ್ಟರ್‌ರವರು ಹಾಗೂ ಮಾನ್ಯ ಕಾಗೇರಿಯವರು ವಿಚಾರವನ್ನು ಪ್ರಸ್ತಾಪ ಮಾಡಿದ್ದಾರೆ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ: ನಾವು ಮೂರು-ನಾಲ್ಕು ಜನ ಸದಸ್ಯರುಗಳು ಮಾತನಾಡುವವರಿದ್ದೇವೆ.

ಅಧ್ಯಕ್ಷರು : ಅವರು ಮಾತನಾಡುತ್ತಿದ್ದಾರೆ. ಹಿರಿಯ ಸದಸ್ಯರು ಹೀಗೆ ಮಾಡಿದರೆ ನಾನೇನು ಹೇಳಲಿ. ಅವಕಾಶ ಮಾಡಿ ಕೊಡುತ್ತೇನೆ.

ಶ್ರೀ ಟಿ.ಬಿ.ಜಯಚಂದ್ರ: ದಯವಿಟ್ಟು ಸಮಯ ಸಂದರ್ಭವನ್ನು ಅರ್ಥ ಮಾಡಿಕೊಳ್ಳಿ, ಮಾನ್ಯ ಅಧ್ಯಕ್ಷರೆ, ತಾವು ಅವರು ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಟ್ಟಿಲ್ಲ.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ನಾವು ಮಾತನಡುವುದಕ್ಕೆ ಅವಕಾಶ ಮಾಡಿ ಕೊಡಿ. ಇದು ಕೇವಲ ಅಡಿಕೆ ಬೆಳೆಗಾರರ ಸಮಸ್ಯೆ ಅಷ್ಟೆ ಅಲ್ಲ, ಸಾರ್ವಜನಿಕ ಮಹತ್ವದ ವಿಷಯ ಇದೆ. ಇದರಲ್ಲಿ ಬಹಳಷ್ಟು ಹೊಸ ಆಯಾಮಗಳಿವೆ.

ಅಧ್ಯಕ್ಷರು : ಅವರು ನಿಂತು ಮಾತನಾಡುತ್ತಿರುವಾಗ ನೀವು ಮಧ್ಯ ಏದ್ದು ನಿಂತು ಮಾತನಾಡಿದರೆ ಹೇಗೆ? ಅವರು ಮಾತನಾಡುತ್ತಿದ್ದಾರೆ. ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಮಂತ್ರಿಗಳಿಗೆ ಮಾತನಾಡುವುದಕ್ಕೆ ಅವಕಾಶ ಮಾಡಿ ಕೊಡಿ.

ಅಧ್ಯಕ್ಷರು : ದಯವಿಟ್ಟು ಈ ರೀತಿ ಸವಾಲು ಹಾಕಬೇಡಿ. Please.

ಶ್ರೀ ಟಿ.ಬಿ.ಜಯಚಂದ್ರ: ಅವರು ಮಾತನಾಡುವಾಗ ಮಾತನಾಡುತ್ತಾರೆ. ಅಧ್ಯಕ್ಷರೆ, ಏನಿದು?

ಅಧ್ಯಕ್ಷರು : I am very sorry. . .

(ಗೊಂದಲ)

ಶ್ರೀ ಡಿ.ಎನ್. ಜೀವರಾಜ್: ಮಂತ್ರಿಗಳಿಗೆ ಚರ್ಚೆಯೇ ಬೇಡವಾಗಿದೆ. ಅವರು ಹಗೆ ಉತ್ತರ ಕೊಡುವುದಕ್ಕೆ ತಯಾರಾಗಿದ್ದಾರೆ!

ಶ್ರೀ ಟಿ.ಬಿ.ಜಯಚಂದ್ರ: ನಿಲುವಳಿ ಸೂಚನೆಗೆ ಪೂರಕವಾಗಿ ನಿಮ್ಮ ನಾಯಕರು ಮಾತನಡಿದ್ದಾರೆ. ನೀವು ಮಾತನಾಡುವ ಸಂದರ್ಭ ಈಗ ಬಂದಿಲ್ಲ.

ಅಧ್ಯಕ್ಷರು : I am here. No. please.

ಶ್ರೀ ಟಿ.ಬಿ.ಜಯಚಂದ್ರ: ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಪ್ರತಿ ಪಕ್ಷದ ನಾಯಕರಾಗಿ ಕೊಟ್ಟಿರತಕ್ಕಂತಹ ಸೂಚನೆ ಸರ್ಕಾರಕ್ಕೆ ಬಂದಿದೆ. ಸರ್ಕಾರ ಇವತ್ತು ಗುಟ್ಕಾ ನೀಷೇಧ ಮಾಡಿರತಕ್ಕಂತಹ ವಿಚಾರದಲ್ಲಿ ಒಂದು ಆಕ್ಷೇಪವನ್ನು ವ್ಯಕ್ತಪಡಿಸಿದ್ದಾರೆ. ಸದನ ನಡೆಯುವಂತಹ ಸಂದರ್ಭದಲ್ಲಿ

ಮಾನ್ಯ ಮುಖ್ಯಮಂತ್ರಿಗಳು ಇದನ್ನು ಘೋಷಣೆ ಮಾಡಿದ್ದಾರೆ. ಏನಿದು ಅಧ್ಯಕ್ಷರೆ?

(ಗೊಂದಲ)

ಅಧ್ಯಕ್ಷರು : ಮಾನ್ಯ ಕಾಗೇರಿಯವರೇ ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ: ನಾವು ಮಾತನಾಡುತ್ತೇವೆ ನಂತರ ಉತ್ತರ ಹೇಳಿ. ಸರ್ಕಾರ ಚರ್ಚೆಗೆ ಉದಾರವಾಗಿರಬೇಕು.

ಶ್ರೀ ಬಸವರಾಜ ಬೊಮ್ಮಾಯಿ: ಮಾನ್ಯ ಅಧ್ಯಕ್ಷರೆ, ಒಂದು ನಿಮಿಷ ಮಾತನಾಡುತ್ತೇನೆ.

ಅಧ್ಯಕ್ಷರು :- ನಾನು ಹೇಳುವವರೆಗೂ ಒಂದು ನಿಮಿಷ ನೀವು ದಯವಿಟ್ಟು ಕೇಳಿ.

ಶ್ರೀ ಬಸವರಾಜ ಬೊಮ್ಮಾಯಿ:- ಒಂದೇ ನಿಮಿಷ ಮಾತನಾಡುತ್ತೇನೆ.

Mr. SPEAKER: No. please resume your seat.

ಶ್ರೀ ಬಸವರಾಜ ಬೊಮ್ಮಾಯಿ:- ಹಾಗಾದರೆ ನೀವು ಚರ್ಚೆಗೆ ಅವಕಾಶ ಕೊಟ್ಟಮೇಲೆ, ಚರ್ಚೆಯಾದ ಮೇಲೆ ಅವರು ಉತ್ತರ ಕೊಡಲಿ ನನ್ನದೇನೂ ಅಭ್ಯಂತರವಿಲ್ಲ.

(ಗೊಂದಲ)

ಅಧ್ಯಕ್ಷರು :- ನಾನು ನಿಮಗೆ allow ಮಾಡಿಲ್ಲ. ಆದರೂ ಕೂಡ ನೀವು ಮಾತನಾಡುತ್ತಿದ್ದೀರಿ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಬಸವರಾಜ ಬೊಮ್ಮಾಯಿ:- ನೀವು ಚರ್ಚೆಗೆ ಅವಕಾಶ ಕೊಟ್ಟಮೇಲೆ ಅವರು ಉತ್ತರ ಕೊಡಲಿ.

ಶ್ರೀ ಟಿ.ಬಿ.ಜಯಚಂದ್ರ:- ಏನು ನೀವು ಅಧ್ಯಕ್ಷರಿಗೇ ಸವಾಲು ಹಾಕುವುದಕ್ಕೆ ಶುರು ಮಾಡಿಬಿಟ್ಟಿದ್ದಿರಿ. ಏನಿದು?

ಅಧ್ಯಕ್ಷರು :- Please, resume your seat. ಈಗ ಅವರು ಒಂದು technical point raise ಮಾಡಿ ಸದನ ನೇರುವಂಥ ಸಂದರ್ಭದಲ್ಲಿ ಅದಕ್ಕೂ ಮುಂಚೆ ಘೋಷಣೆ ಮಾಡಿರುವಂಥದ್ದು ಸಂಪ್ರಾದಾಯವಲ್ಲ ಎಂದಿದ್ದಾರೆ. ಅದಷ್ಟಕ್ಕೆ ಮಾತ್ರ ಸೀಮಿತವಾಗಿ ನೀವು ಹೇಳಿ. ಅದರ ಮೆರಿಟ್ ಮೇಲೆ ನೀವು ದಯವಿಟ್ಟು ಮಾತನಾಡಲು ಹೋಗಬೇಡಿ.

ಶ್ರೀ ಟಿ.ಬಿ.ಜಯಚಂದ್ರ:- ಮಾನ್ಯ ಅಧ್ಯಕ್ಷರೆ, ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡಿ ಮಾನ್ಯ ಮುಖ್ಯಮಂತ್ರಿಗಳು ಸತ್ಸಂಪ್ರದಾಯಗಳನ್ನು ಮುರಿದಿದ್ದಾರೆ ಎಂದು ಹೇಳಿದ್ದಾರೆ. ಬಹುಶಃ ಇದು ಏಕೆ ಅನಿವಾರ್ಯವಾಗಿತ್ತು ಎನ್ನತಕ್ಕಂಥದ್ದನ್ನು ಹೇಳುವುದಾದರೆ, ಈ ಗುಟ್ಕಾವನ್ನು ನಿಷೇಧ ಮಾಡಬೇಕು

ಎನ್ನತಕ್ಕಂಥರ ಬಗ್ಗೆ ಹಿಂದೆ ಅವರು ಈ ಕಡೆ ಕುಳಿತಿದ್ದಂಥ ಸಂದರ್ಭದಲ್ಲಿಯೂ ಆದುದರಿಂದ ಪ್ರಸ್ತಾಪವಾಗಿದೆ. ಆದುದರಿಂದ ಇದು ಏಕೆ ಅನಿವಾರ್ಯವಾಗಿತ್ತು ಎಂದು ನಾವು ಹೇಳುವುದಕ್ಕೆ ತಯಾರಿದ್ದೇವೆ. ಆದರೆ ಅವರು ಪ್ರಸ್ತಾಪ ಮಾಡುವಂಥ ಸಂದರ್ಭದಲ್ಲಿ, ಬಸವರಾಜ ಬೊಮ್ಮಾಯಿಯವರು ಕೂಡ ಧ್ವನಿಗೂಡಿಸುತ್ತಿರುವಂಥ ಸಂದರ್ಭದಲ್ಲಿ ನಾನು ಅವರಿಗೆ ಇಷ್ಟೇ ಹೇಳುತ್ತೇನೆ, ನಾವು ಯಾವುದಕ್ಕೂ ಕೂಡ ಈ ವಿಚಾರದಲ್ಲಿ ಚರ್ಚೆ ಮಾಡುವುದಕ್ಕೆ ತಯಾರಿದ್ದೇವೆ. ಅದರಿಂದ ನಾವು ಹಿಂದಕ್ಕೆ ಹೋಗುವುದಿಲ್ಲ. ಚರ್ಚೆಯಾಗಲೇಬೇಕು.

ಅಧ್ಯಕ್ಷರು :– ಈಗ ಒಂದು ಕೆಲಸ ಮಾಡೋಣ. ರೂಲ್ 69 ರ ಪ್ರಕಾರ ಇದನ್ನು ಕನ್‌ವರ್ಟ್ ಮಾಡೋಣ. ಚರ್ಚೆಗೆ ಸಂಪೂರ್ಣ ಅವಕಾಶ ಕೊಡೋಣ.

(ಗೊಂದಲ)

ಶ್ರೀ ಜಗದೀಶ್ ಶೆಟ್ಟರ್:– ಮಾನ್ಯ ಅಧ್ಯಕ್ಷರೆ, ನಾನು ಕೂಡ ಸಭಾಧ್ಯಕ್ಷನಾಗಿ ಕೆಲಸ ಮಾಡಿದ್ದೇನೆ. ನೀವು ಪದೇ ಪದೇ ಮಾತನಾಡುವಾಗ ಎದ್ದು ನಿಂತುಕೊಂಡು ಮಾತನಾಡಬೇಡಿ. ತಾವು ದಯವಿಟ್ಟು ಕುಳಿತುಕೊಂಡು ಮಾತನಾಡಿ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನಾನು ತಮ್ಮಲ್ಲಿ ಮನವಿ ಮಾಡುವುದಿಷ್ಟೆ. ಚರ್ಚೆಗೆ ನಾವು ತಯಾರಾಗಿದ್ದೇವೆ. ಯಾವ ಸಂದರ್ಭದಲ್ಲಿ ಈ ತೀರ್ಮಾನವನ್ನು ತೆಗೆದುಕೊಂಡೆವು ಎನ್ನುವುದನ್ನೂ ಕೂಡ ಹೇಳುವುದಕ್ಕೆ ನಾವು ತಯಾರಾಗಿದ್ದೇವೆ. ಸರ್ಕಾರದ ನಿಲುವನ್ನು ಸಮರ್ಥನೆ ಮಾಡುವುದಕ್ಕೆ ನಾವು ತಯಾರಿದ್ದೇವೆ. ಆದರೆ ನಾನು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳುವುದೇನೆಂದರೆ, ಅವರು ಯಾವುದೇ ರೂಪದಲ್ಲಿ ಪ್ರಸ್ತಾಪ ಕೂಡ ಚರ್ಚೆ ಮಾಡಬಹುದು. ನಿಯಮ 69 ರಡಿಯಲ್ಲಿ ಚರ್ಚೆ ಮಾಡುವುದಕ್ಕೆ ನಮ್ಮದೇನೂ ಆಭ್ಯಂತರವಿಲ್ಲ. ಆದರೆ ಒಂದು ವಿಷಯವನ್ನು ಜಗದೀಶ್ ಶೆಟ್ಟರ್‌ರವರಿಗೆ ಜ್ಞಾಪಿಸುತ್ತೇನೆ. ಇವತ್ತು ಪ್ರಥಮವಾಗಿ ಮಾನ್ಯ ರಾಜ್ಯಪಾಲರ ಭಾಷಣದ ಮೇಲೆ ಪಂದನಾ ನಿರ್ಣಯ ಪ್ರಸ್ತಾಪ ಮಂಡನೆಯಾಗಬೇಕು. ಅದು ಸದನದ ಹಕ್ಕು ಮತ್ತು ಸಂವಿಧಾನಯುತವಾದ ಒಂದು ಬದ್ಧತೆ. ಅದು ಮಂಡನೆಯಾದ ಮೇಲೆ ನೀವು ಬೇರೆ ಚರ್ಚೆಗೆ ಅವಕಾಶ ಮಾಡಿಕೊಡಿ, ನಮ್ಮದೇನೂ ಅಭ್ಯಂತರವಿಲ್ಲ. ನಾವು ಉತ್ತರ ಕೊಡುವುದಕ್ಕೆ ತಾಯಾರಿದ್ದೇವೆ. ಅದೇ ರೀತಿ ಬಸವರಾಜ ಬೊಮ್ಮಾಯಿಯವರಿಗೆ, ವಿಶ್ವೇಶ್ವರ ಹೆಗಡೆ, ಎಲ್ಲರಿಗೂ ಕೂಡ ತಾವು ಮಾತನಾಡುವುದಕ್ಕೆ ಅವಕಾಶವನ್ನು ಮಾಡಿಕೊಡಿ. ನಮ್ಮದೇನೂ ಅಭ್ಯಂತರವಿಲ್ಲ.

(ಗೊಂದಲ)

ಶ್ರೀ ಕೆ.ಎಂ. ಶಿವಲಿಂಗೇಗೌಡ:– ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯ ಮಂಡನೆಯಾದ ಮೇಲೆ ನಮಗೆ ಮಾತನಾಡಲು ಅವಕಾಶ ಮಾಡಿಕೊಡಿ ಎರಡು ಲಕ್ಷ ತೆಂಗಿನ ಮರಗಳನ್ನು ನಮ್ಮ ಭಾಗದಲ್ಲಿ ಬಿದ್ದುಹೋಗಿವೆ.

ಅಧ್ಯಕ್ಷರು :– ಶಿವಲಿಂಗೇಗೌಡರೆ, ತಾವು ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ:– ಮಾನ್ಯ ಅಧ್ಯಕ್ಷರೆ, ನೀವು ನಿಯಮ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಅದನ್ನು ಯಾವಾಗ ತೆಗೆದುಕೊಳ್ಳಬೇಕು ಎಂದು ಹೇಳತಕ್ಕಂಥದ್ದನ್ನು ನಾನು ಹೇಳಿದ್ದೇನೆ.

ಶ್ರೀ ಜಗದೀಶ್ ಶೆಟ್ಟರ್:– ಜಯಚಂದ್ರರವರೆ, ನೀವು ಈ ಕಡೆ ವಿರೋಧ ಪಕ್ಷದಲ್ಲಿ ಉಪನಾಯಕರಾಗಿದ್ದಾಗ ನಿಲುವಳಿ ಸೂಚನೆಗೆ preliminary submission ನಲ್ಲಿಯೇ ತಾಸುಗಟ್ಟಲೆ ಮಾತನಾಡಿದ್ದೀರಿ. ಈಗ ತಾವು ಮರೆತುಬಿಟ್ಟಿದ್ದೀರಿ. ಬೇಕಾದರೆ ನೀವು ಪ್ರೊಸೀಡಿಂಗ್ಸ್ ತೆಗೆಸಿ ನೋಡಿ.

ಅಧ್ಯಕ್ಷರು :– ಈಗ ಮಾನ್ಯ ಮುಖ್ಯಮಂತ್ರಿಗಳು ಎದ್ದು ನಿಂತಿದ್ದಾರೆ. ತಾವು ದಯವಿಟ್ಟು ಕುಳಿತುಕೊಳ್ಳಿ.

(ಗೊಂದಲ)

ಅಧ್ಯಕ್ಷರು :– ತಾವು ಈಗ ಕುಳಿತುಕೊಳ್ಳಿ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಿಲುವಳಿ ಸೂಚನೆಯನ್ನು ನಿಯಮ 69 ಕ್ಕೆ ಕನ್‌ವರ್ಟ್ ಮಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು :– ಮುಖ್ಯಮಂತ್ರಿಗಳು ಮಾತನಾಡುತ್ತಾರೆ. ನೀವು ಕುಳಿತುಕೊಳ್ಳಿ.

ಶ್ರೀ ಸಿದ್ದರಾಮಯ್ಯ (ಮುಖ್ಯಮಂತ್ರಿಗಳು) :– ಮಾನ್ಯ ಅಧ್ಯಕ್ಷರೆ, ಚರ್ಚೆ ಮಾಡುವುದಕ್ಕೆ ನಮ್ಮದೇನೂ ವಿರೋಧವಿಲ್ಲ. ಅವರು ರೂಲ್ 60 ರಡಿಯಲ್ಲಿ ಅವಕಾಶ ಮಾಡಿಕೊಡಬೇಕೆಂದು ತಮಗೆ ನೋಟಿಸ್ ಕೊಟ್ಟಿದ್ದಾರೆ. ಬಿ.ಜೆ.ಪಿ. ನಾಯಕರಾದ ಮಾನ್ಯ ಜಗದೀಶ್ ಶೆಟ್ಟರ್‌ರವರು ಈ ಬಗ್ಗೆ ಪ್ರಿಲಿಮನರಿ ಸಬ್‌ಮಿಶನ್ ಮಾಡಿದ್ದಾರೆ. ಸಂಸದೀಯ ವ್ಯವಹಾರಗಳ ಸಚಿವರು ಈಗಾಗಲೇ ಮಾತನಾಡಿ ನಾವು ಚರ್ಚೆಗೆ ತಯಾರಾಗಿದ್ದೇವೆ. ಚರ್ಚೆ ಮಾಡುವುದಕ್ಕೆ ನಾವು

ಹಿಂದೆ ಬೀಳುವ ಪ್ರಶ್ನೆಯೇ ಇಲ್ಲ ರೂಲ್ 60 ರಡಿಯಲ್ಲಿ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ನೀವು ಹೇಳಿದಂತೆ ರೂಲ್ 69 ಕ್ಕೆ ಕನ್ವರ್ಟ್ ಮಾಡಿ ಚರ್ಚೆ ಮಾಡುವುದಕ್ಕೆ ನಾವು ತಯಾರಿದ್ದೇವೆಂದು ಹೇಳಿದ್ದಾರೆ. ನೀವು ಆ ರೀತಿ ಹೇಳಿದ ಮೇಲೆ ಎಲ್ಲರೂ ಪಿಲಿಮನರಿ ಸಬ್‌ಮಿಶನ್ ಮೇಲೆ ಮಾತನಾಡುವುದಕ್ಕೆ ಬರುವುದಿಲ್ಲ. ನೋಟಿಸ್‌ನಲ್ಲಿ ಸಹಿ ಮಾಡಿದವರೆಲ್ಲರೂ ಕೂಡ ಪ್ರಿಲಿಮರಿ ಸಬ್‌ಮಿಶನ್ ಮೇಲೆ ಮಾತನಾಡುವುದಕ್ಕೆ ಆಗುವುದಿಲ್ಲ. ರೂಲ್ 69 ರಡಿಯಲ್ಲಿ ಚರ್ಚೆಗೆ ಅವಕಾಶ ಕೊಟ್ಟ ಮೇಲೆ ಚರ್ಚೆಯಲ್ಲಿ ಎಲ್ಲರೂ ಭಾಗವಹಿಸಬಹುದು ಅವಕಾಶವಿದೆ. ಚರ್ಚೆಯಲ್ಲಿ ಅವರು ಏನೇನು ಹೇಳಬೇಕೆಂದಿದ್ದಾರೋ ಅದನ್ನೆಲ್ಲವನ್ನೂ ಅದನ್ನೆಲ್ಲವನ್ನೂ ಹೇಳಲಿ. ಸರ್ಕಾರ ಅದಕ್ಕೆ ಸಮರ್ಥವಾಗಿ ಉತ್ತರ ಕೊಡುತ್ತದೆ. ಆದರೆ ಈಗ ಪ್ರಿಲಿಮನರಿ ಸಬ್‌ಮಿಶನ್ ಮೇಲೆ ನಾನು ಮಾತನಾಡಬೇಕು, ನಾನು ಮಾತನಾಡಬೇಕು ಎಂದು ಎಲ್ಲರೂ ಹೇಳಿದರೆ ಆಗುವುದಿಲ್ಲ. ಈಗಾಗಲೇ ಬಿ.ಜೆ.ಪಿ. ನಾಯಕರು ರೂಲ್ 60 ರಲ್ಲಿ ಇದು ಬರುತ್ತದೋ ಇಲ್ಲವೋ ಎಂಬ ಬಗ್ಗೆ ಮಾನ್ಯ ಅಧ್ಯಕ್ಷರಾದ ತಮ್ಮನ್ನು convince ಮಾಡುವುದಕ್ಕೆ ಮಾತನಾಡಿದ್ದಾರೆ. It is only a preliminary submission ಪ್ರಿಲಿಮನರಿ ಸಬ್‌ಮಿಶನ್ ಎಂದರೆ ಅದರ ಮೇಲೆ ಎಲ್ಲರೂ ಭಾಗವಹಿಸಿ ಮಾತನಾಡಬೇಕು ಎಂಬ ಅರ್ಥವಲ್ಲ. ಈಗಾಗಲೇ ಮಾನ್ಯ ಜಗದೀಶ್ ಶೆಟ್ಟರ್‌ರವರು ಮಾತನಾಡಿದ್ದಾರೆ. ನಾವು ಚರ್ಚೆಗೆ ಒಪ್ಪಿಕೊಂಡಿದ್ದೇವೆ. ರೂಲ್ 69 ಕ್ಕೆ ತಾವು ಕನ್‌ವರ್ಟ್ ಮಾಡಿದ್ದೀರಿ. ವಂದನಾ ನಿರ್ಣಯ ಮಂಡಿಸಿದ ಮೇಲೆ ನೀವು ಯಾವಾಗಲಾದರೂ ಚರ್ಚೆಗೆ ತೆಗೆದುಕೊಳ್ಳಿ ನಾವು ಉತ್ತರ ಕೊಡುವುದಕ್ಕೆ ತಯಾರಾಗಿದ್ದೇವೆ.

ಶ್ರೀ ಜಗದೀಶ್ ಶೆಟ್ಟರ್:– ಹಿಂದೆ ವಿರೋಧ ಪಕ್ಷದಲ್ಲಿ ಉಪ ನಾಯಕರಾಗಿದ್ದ ಜಯಚಂದ್ರರವರು ಪ್ರಿಲಿಮನರಿ ಸಬ್‌ಮಿಶನ್ ಮೇಲೆ ಮಾತನಾಡಿಲ್ಲವೆ? ನೀವೊಬ್ಬರೆ ಮಾತನಾಡಿದ್ದಿರಾ? ನೀವೂ ಮಾತನಾಡಿದ್ದೀರಿ, ಜಯಚಂದ್ರರವರೂ ಮಾತನಾಡಿದ್ದಾರೆ. ಇವತ್ತು ಯಾವುದೇ ಒಂದು ನಿಲುವಳಿ ಸೂಚನೆ ಬಂದರೆ ಪ್ರಿಲಿಮನರಿ ಸಬ್‌ಮಿಶನ್‌ನಲ್ಲಿ ಎಷ್ಟು ಜನ ಮಾತನಾಡಬೇಕು ಎಂದು ಹೇಳುವುದಕ್ಕೆ ಮಾನ್ಯ ಅಧ್ಯಕ್ಷರಾದ ತಮಗೆ ಅಧಿಕಾರವಿದೆ. ಇವತ್ತು ಈಗಾಗಲೇ ನಾವು ರೂಲ್ 60 ರ ಪ್ರಕಾರ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ರೂಲ್ 60 ಪ್ರಕಾರವೇ ಚರ್ಚೆಯಾಗಬೇಕು ಎನ್ನತಕ್ಕಂಥ ಒತ್ತಾಯವನ್ನೂ ಕೂಡ ಮಾಡುತ್ತಿದ್ದೇನೆ. ಏಕೆಂದರೆ ಅದಕ್ಕಿರುವಂಥ importance ಆ ರೀತಿಯಿದೆ. ಇವತ್ತು ಅಡಿಕೆ ಬೆಳೆಗಾರರು ಬಹಳ

ತೊಂದರೆಯಲ್ಲಿದ್ದಾರೆ. ಅವರಿಗೆ ಆಗಿರು ತೊಂದರೆ ನಿವಾರಣೆ ಮಾಡವ ಸಲುವಾಗಿ ಪ್ರಯಾರಿಟಿ ಕೊಟ್ಟು ಇಲ್ಲಿ ಚರ್ಚೆಯಾಗಬೇಕು ಎಂಬುದೇ ನಮ್ಮ ಉದ್ದೇಶ. ಅದಕ್ಕಾಗಿಯೇ ನಾವು ರೂಲ್ 60 ನಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ರೂಲ್ 69 ಕ್ಕೆ ಕನವರ್ಟ್ ಮಾಡಿ, ಅದರ ಮೇಲೆ ಚರ್ಚೆ ಮಾಡಿ ಎಂದು ಹೇಳುವುದು ಇದ್ದೇ ಇರುತ್ತದೆ. ಇದು ಎಲ್ಲಾ ಕಡೆ ನಡೆಯುವಂಥದ್ದು. ಆದರೆ ನಾವು ಹೇಳುವುದು ರೂಲ್ 60 ರ ಪ್ರಕಾರವೇ ಚರ್ಚೆಗೆ ದಯವಿಟ್ಟು ಅವಕಾಶವನ್ನು ಮಾಡಿಕೊಡಿ. ಇಡೀ ರಾಜ್ಯದಲ್ಲಿ 14 ಜಿಲ್ಲೆಗಳಲ್ಲಿ ಲಕ್ಷಾಂತರ ಅಡಿಕೆ ಬೆಳೆಗಾರರು ತೊಂದರೆಯಲ್ಲಿದ್ದಾರೆ. ಅಡಿಕೆ ಬೆಲೆ ಕುಸಿಯುತ್ತಿದೆ. ಅಡಿಕೆ ಬೆಳೆಗಾರರು ಬಹಳಷ್ಟು ತೊಂದರೆಯಲ್ಲಿದಾರೆ. ಇವತ್ತು ಇಡೀ ಒಂದು ವ್ಯವಸ್ಥೆ ಸಂಪೂರ್ಣವಾಗಿ ಕುಸಿದುಹೋಗುವಂಥ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ತಕ್ಷಣವೇ ಏನಾದರೂ ಒಂದು ರೆಮಿಡಿ ಕೊಡಬೇಕು. 30 ನೇ ತಾರೀಖು ನೋಟಿಫಿಕೇಶನ್ ಇಶ್ಯೂ ಮಾಡಿದಾರೆ. ಆ ನೋಟಿಫಿಕೇಶನ್‌ನ್ನು ನೀವು ತಕ್ಷಣವೇ held up ಮಾಡಿ. ನೀವು ಆ ನೋಟಿಫೀಕೇಶನ್ held up ಮಾಡಿ ಶಾಸಕರುಗಳನ್ನು ಜನಪ್ರತಿನಿಧಿಗಳನ್ನು ಕರೆದು ಚರ್ಚೆ ಮಾಡಿ. ಇದಕ್ಕೇನು remedy, alternative ವ್ಯವಸ್ಥೆ ಮಾಡಬೇಕು, ಇದಕ್ಕೇನು ಪರಿಹಾರ ಎಂಬ ಬಗ್ಗೆ ಚಿಂತನೆಯನ್ನು ಮಾಡಲಿ. ತಕ್ಷಣವೇ ಎಲ್ಲವನ್ನೂ ರದ್ದು ಮಾಡಿ ಎಂದು ನಾವೇನು ಹೇಳುತ್ತಿಲ್ಲ. ಆದರೆ ಜನ ಪ್ರತಿನಿದಿಗಳನ್ನು, ಶಾಸಕರನ್ನು ಕರೆದು ಮಾತನಾಡುವಂಥ ಪ್ರಕ್ರಿಯಯೇ ಈ ಬಾರಿ ಆಗಿಲ್ಲ. ಆ ಅಡಿಕೆ ಬೆಳೆಗಾರರ ಸಂಕಷ್ಟ ಏನು ಎಂಬುದು ಇವರಿಗೆ ಗೊತ್ತಿಲ್ಲ. ನಿಮಗೆ ಚುನಾವಣೆಯಲ್ಲಿ ಬೆಂಬಲ ಕೊಟ್ಟರುವ ಅವನ್ನೆಲ್ಲಾ ನೀವು ಪಾತಾಳಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ. ಅವರು ಏಕಪ್ಪಾ ಕಾಂಗ್ರೆಸ್‌ನವರಿಗೆ ನೀವು ಪಾತಾಳಕ್ಕೆ ತೆಗೆದುಕೊಂಡು ಹೋಗುತ್ತಿದ್ದೀರಿ. ಅವರು ಏಕಪ್ಪಾ ಕಾಂಗ್ರೆಸ್‌ನವರಿಗೆ ಬೆಂಬಲ ಕೊಟ್ಟೆವೋ ಎಂದು ಹೇಳುತ್ತಿದ್ದಾರೆ. ಆ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಅಲ್ಲಿಂದ ಈ ಭಾಗದಲ್ಲಿ ಮತ್ತು ಆ ಭಾಗದಲ್ಲಿ ಎಷ್ಟೋ ಜನ ಶಾಸಕರು ಆರಿಸಿ ಬಂದಿದ್ದಾರೆ.

(ಗೊಂದಲ)

ಅಧ್ಯಕ್ಷರು:- ಜಗದೀಶ್ ಶೆಟ್ಟರ್‌ರವರೆ, ಪ್ರಶ್ನೇಯನ್ನು ನೀವೇ ಹೇಳುತ್ತೀರಿ, ಉತ್ತರವನ್ನೂ ಕೂಡ ನೀವೇ ಹೇಳುತ್ತೀರಿ. ಈ ರೀತಿಯಾದರೆ ಯಾವುದೂ ಕೂಡ ಕಡತಕ್ಕೆ ಹೋಗುವುದಿಲ್ಲ.

ಶ್ರೀ ಜಗದೀಶ್ ಶೆಟ್ಟರ್:- ಮಾನ್ಯ ಅಧ್ಯಕ್ಷರೆ, ರೂಲ್ 60 ರಡಿಯಲ್ಲಿ ನೀವು ಚರ್ಚೆಗೆ ಅವಕಾಶ ಮಾಡಿಕೊಡಬೇಕು ಮತ್ತು ಈಗ ಪ್ರಿಲಿಮನರಿ

ಸಬ್‌ಮಿಶನ್ ನಲ್ಲಿ ವಿಶ್ವೇಶ್ವರ ಹೆಗಡೆಯವರು ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ:– ಮಾನ್ಯ ಅಧ್ಯಕ್ಷರೆ, ನಾವು ನಿಯಮ 60 ರಡಿಯಲ್ಲಿ ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇವೆ. ನಿಯಮ 60 ರಡಿಯಲ್ಲಿಯೇ ಚರ್ಚೆಯಾಗಬೇಕಾದ ಅಗತ್ಯವಿದೆ.

(ಗೊಂದಲ)

ಅಧ್ಯಕ್ಷರು:– ಒಂದು ನಿಮಿಷ ಎಲ್ಲರೂ ಕುಳಿತುಕೊಳ್ಳಿ. ಈಗ ರಾಜ್ಯಪಾಲರ ವಂದನಾ ನಿರ್ಣಯದ ಪ್ರಸ್ತಾವವನ್ನು ಮೊದಲು ಮಂಡಿಸಲಿ. ಮಂಡಿಸಿದ ಮೇಲೆ ಚರ್ಚೆಗೆ ತೆಗೆದುಕೊಳ್ಳೋಂ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ:– ನಾವು ನಿಯಮ 60ರ ಅಡಿಯಲ್ಲಿ ನಿಲುವಳಿ ಸೂಚನೆ ಮಂಡಿಸಿದ್ದೇವೆ. ನಮ್ಮ ಅಪೇಕ್ಷೆ ಇರುವುದು ನಮ್ಮ ನಾಯಕರಾದಂತಹ ಮಾನ್ಯ ಜಗದೀಶ್‌ಶೆಟ್ಟರ್‌ರವರು ಹೇಳಿದಂತೆ ಈ ವಿಷಯ 60ರ ಅಡಿಯಲ್ಲಿಯೇ ಚರ್ಚೆಯಾಗಬೇಕು.

ಶ್ರೀ ಆರ್. ಅಶೋಕ್:– Speaker ರವರು ಆ ವಿಷಯವನ್ನು 69ಗೆ convert ಮಾಡಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರು ಈ ವಿಷಯವನ್ನು ನಿಯಮ 69ಕ್ಕೆ convert ಮಾಡಿದ್ದೇನೆ, ಚರ್ಚೆಗೆ ಅವಕಾಶ ಕೊಡುತ್ತೇನೆಂದು ರೂಲಿಂಗ್ ಕೊಟ್ಟ ಮೇಲೆ ಈ ರೀತಿ ಪದೇಪದೇ ಎದ್ದರೆ ಹೇಗೆ? ಆ ರೀತಿ ನೀವು ಹೇಳಿದ ಮೇಲೂ ಮತ್ತೆ ಮತ್ತೆ ಪ್ರತಿಯೊಬ್ಬರೂ ಎದ್ದೇಳುವುದನ್ನು ಮಾಡುತ್ತಿದ್ದಾರೆ. ನೀವು ಚರ್ಚೆಯಲ್ಲಿ ಭಾಗವಹಿಸಿ ಏನೇನು ಹೇಳಬೇಕೋ ಅದನ್ನೆಲ್ಲ ಹೇಳಿ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ, ನಮಗೆ ಗೊತ್ತಿರುವಂತೆ ಸುಮಾರು 14–15 ಜಿಲ್ಲೆಗಳ ಅಡಿಕೆ ಬೆಳೆಗಾರರಿಂದ ಓಟು ತೆಗೆದುಕೊಂಡು ಗೆದ್ದು ಬಂದಂತಹವರು ಆ ಕಡೆಯಲ್ಲಿ ಇದ್ದಾರೆ ಮತ್ತು ಈ ಕಡೆಯಲ್ಲೂ ಇದ್ದಾರೆ. ಸದನ ನಡೆಯುವಂತಹ ಕಾಲದಲ್ಲಿ ಇಂತಹ ಪ್ರಮುಖವಾದ ವಿಷಯ ಗುಟ್ಕಾ ರದ್ದು ಮಾಡುವುದರಿಂದ ಅಡಿಕೆ ಬೆಳೆಗಾರರ ಮೇಲೆ ದುಷ್ಪರಿಣಾಮವಾಗುತ್ತದೆ, ಅಡಿಕೆ ಬೆಲೆ ಕುಸಿದು ಹೋಗುತ್ತದೆ. ಎನ್ನುವ ಆತಂಕ ಅವರಲ್ಲಿ ಬರುತ್ತದೆ. ಸದನ ನಡೆಯುತ್ತಿರುವಾಗ ಇದರ ಬಗ್ಗೆ ನಾವು ಪ್ರಸ್ತಾಪ ಮಾಡಲಿಲ್ಲವೆಂದರೆ ಜನರಿಗೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ನೀವು ಅಡಿಕೆ ಬೆಳೆಯುವಂತಹ ಜಿಲ್ಲೆಯಲ್ಲಿರುವ ಸಾಗರದಿಂದ ಬಂದವರು.

ನಾನು ನಿಮ್ಮಲ್ಲಿ ಕೈಜೋಡಿಸಿ ವಿನಂತಿ ಮಾಡುವುದು ಇಷ್ಟೆ. ದಯಮಾಡಿ ಒಂದು ನಿಲುವಳಿ ಸೂಚನೆ ಕೊಟ್ಟಮೇಲೆ preliminary submission ಗೆ ಅವಕಾಶ ಮಾಡಿ ಕೊಡಿ. ಅನಂತರ ಅದನ್ನು ನೀವು convert ಮಾಡಿ. ಆಮೇಲೆ ಎಲ್ಲರಿಗೂ ಚರ್ಚೆ ಮಾಡುವುದಕ್ಕೆ ಅವಕಾಶ ಮಾಡಿಕೊಡಿ. ಮಾನ್ಯ ಮುಖ್ಯಮಂತ್ರಿಗಳು ವಿರೋಧ ಪಕ್ಷದ ನಾಯಕರಾಗಿದ್ದಾಗ ಕೂಡ ಇಂತಹ ವಿಷಯಗಳು ಬಂದಾಗ ಕೈಕಟ್ಟಿಕೊಂಡು ಕುಳಿತುಕೊಳ್ಳುತ್ತಿರಲ್ಲಿಲ್ಲ, ಅವರು ಪ್ರಸ್ತಾಪ ಮಾಡುತ್ತಿದ್ದರು. ಅಡಿಕೆ ಬೆಳೆಗಾರರು ಆತಂಕದಲ್ಲಿರುವಂತಹ ಈ ಸಂದರ್ಭದಲ್ಲಿ ಗುಟ್ಕಾ ನಿಷೇಧದ ಬಗ್ಗೆ notification ಹೊರಡಿಸಿದ್ದೆ ಅದನ್ನು ವಾಪಸ್ಸು ತೆಗೆದುಕೊಳ್ಳಿ. ಅದರ ಬಗ್ಗೆ ಚರ್ಚೆ ಮಾಡೋಣ. ಅದಾದಮೇಲೆ ನೀವು ಮಾಡಲೇಬೇಕೆನ್ನುವುರಾದರೆ ನಮ್ಮದೇನೂ ಅಭ್ಯಂತರವಿಲ್ಲ, ನೀವು ಮಾಡುವಿರಂತೆ. ಆದರೆ ಈಗ ಚರ್ಚೆಗೆ ಅವಕಾಶ ಮಾಡಿಕೊಟ್ಟು ನಂತರ ಒಂದು ತೀರ್ಮಾನಕ್ಕೆ ಬನ್ನಿ ಎಂದು ವಿನಂತಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು :– ಈಗ ಮೊದಲು ನಿರ್ಣಯವನ್ನು ಮಂಡಿಸಲಿ. ಅದಾದ ಮೇಲೆ ನಿಯಮ 69ರ ಪ್ರಕಾರ ಚರ್ಚೆ ಮಾಡುವುದಕ್ಕೆ ನಾನು ಸಂಪೂರ್ಣವಾಗಿ ಒಪ್ಪಿದ್ದೇನೆ, ನಾನು ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಆರ್. ಅಶೋಕ್ :– ತಾವು ಇನ್ನು convert ಮಾಡಿಲ್ಲ. ತಾವು ಈಗಷ್ಟೇ ಹೇಳುತ್ತಿದ್ದೀರಿ. ಇದು ನಿಯಮ 60ರ ಅಡಿಯಲ್ಲೇ ಚರ್ಚೆಯಾಗಬೇಕು.

ಅಧ್ಯಕ್ಷರು :– ಆಯಿತಲ್ಲ, ನಾನು ಹೇಳಿದ್ದೇನೆ, ಈಗ ಸಾಕು.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ :– ಮಾನ್ಯ ಅಧ್ಯಕ್ಷರೆ, ಈಗ ತಾವು ಈ ವಿಚಾರವನ್ನು 69ಎ ಅಡಿಯಲ್ಲಿ . . . . .

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ :– ನಾನು ಈ ರೀತಿಯಾಗಿ ನಿರೀಕ್ಷೆ ಮಾಡಿರಲಿಲ್ಲ. ಮಾನ್ಯ ಕಾಗೇರಿಯವರು ಮಂತ್ರಿಯಾಗಿದ್ದಂಥವರು.

ಅಧ್ಯಕ್ಷರು:– ಇದಾದ ಕೂಡಲೇ ಮಾಡುವಿರಂತೆ. ಈಗಲೇ . . .

(ಗೊಂದಲ)

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರು ತೀರ್ಪು ಕೊಟ್ಟಮೇಲೆ ನಿಮ್ಮ ನಾಯಕರು ಮಾತನಾಡಿದ್ದಾರೆ. ಇವತ್ತು ಪೀಠದಿಂದ ಆದೇಶವಾಗಿದೆ. ಮತ್ತೆ ಇದನ್ನು ಪ್ರಸ್ತಾಪ ಮಾಡುತ್ತೀರಿ.

ಅಧ್ಯಕ್ಷರು :– Please ಸುಮ್ಮನಿರಿ. ಈಗ "2013ರ ಜೂನ್ 3 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ

ದಯಾಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆಂದು ಶ್ರೀ ಬಸವರಾಜ್ ರಾಯರೆಡ್ಡಿಯವರು ಸೂಚಿಸುವುದು.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, 2013ರ ಜೂನ್ 3ರಂದು ಸೂಚಿಸುವುದು.

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಅಧ್ಯಕ್ಷರೆ, 2013ರ ಜೂನ್ 3ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ. . . .

ಶ್ರೀ ಹೆಚ್.ಡಿ. ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) : ಮಾನ್ಯ ರಾಯರೆಡ್ಡಿಯವರೆ ಒಂದು ನಿಮಿಷ, ಮಾನ್ಯ ಅಧ್ಯಕ್ಷರ ಹತ್ತಿರ ತಿದ್ದುಪಡಿಗೆ ಒಂದು clarification ಕೇಳುತ್ತಿದ್ದೇನೆ. ಇದು ಬಹಳ serious subject ಇದೆ, ಅದಕ್ಕೋಸ್ಕರ ಕೇಳುತ್ತಿದ್ದೇನೆ. ಮಾನ್ಯ ಅಧ್ಯಕ್ಷರೆ, ನಾನು ನಿಮಗೆ ಬೆಳಿಗ್ಗೆ ಒಂದು letter ಕಳುಹಿಸಿದ್ದೇನೆ. ನಿಯಮ 21ರ ಅಡಿಯಲ್ಲಿ ಒಂದು ತಿದ್ದುಪಡಿಗೆ ಬರಬೇಕೆಂದು ನಾನು ಸದನದ ಗಮನಕ್ಕೆ ತಮ್ಮ ಮುಖಾಂತರ ತರುವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು :– ಬಂದಿದೆ.

ಶ್ರೀ ಹೆಚ್.ಡಿ. ಕುಮಾರಸ್ವಾಮಿ : ಇವತ್ತು ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಹೇಳಿರುವಂತೆ ಕಾವೇರಿ ಐತೀರ್ಪಿಗೆ ಅನುಸಾರವಾಗಿ ಕಾವೇರಿ ಜಲಾನಯನದ ಬಾಕಿಯಿರುವ ವಿಸ್ತರಣಾ, ನವೀಕರಣ ಮತ್ತು ಆಧುನೀಕರಣ ಯೋಜನೆಗಳಿಗೆ ಭಾರತ ಸರ್ಕಾರದ ಅನುಮೋದನೆಯನ್ನು ಕೋರಲಾಗುವುದು ಎಂದು ಏನಿದೆ, ಇದರಲ್ಲಿ ನಮ್ಮ ರಾಜ್ಯಕ್ಕೆ . . .

ಅಧ್ಯಕ್ಷರು :– ವಿರೋಧ ಪಕ್ಷದ ನಾಯಕರೇ, ದಯವಿಟ್ಟು. . . .

(ಗೊಂದಲ)

ಅಧ್ಯಕ್ಷರು :– ನಾವು ಹಾಕುತ್ತೇವೆ, ಅದನ್ನು ಕೊಡುತ್ತೇವೆ.

ಶ್ರೀ ಟಿ.ಬಿ.ಜಯಚಂದ್ರ :– ಅದು ಮಂಡನೆಯಾದ ಮೇಲೆ ತಿದ್ದುಪಡಿ ಬರುವುದು, ನೀವು ಮಂಡಿಸುವುದಕ್ಕೆ ತೊಂದರೆ ಇಲ್ಲ. ಅದು ಮಂಡನೆಯಾಗಲಿ. ಆಮೇಲೆ ತಿದ್ದುಪಡಿಗಳನ್ನು ಕೊಡಬಹುದು.

ಅಧ್ಯಕ್ಷರು :– ಮೊದಲು ಅದರ ಮಂಡನೆ ಆಗಲಿ.

ಶ್ರೀ ಹೆಚ್.ಸಿ. ಬಾಲಕೃಷ್ಣ : ಅದರ ಬಗ್ಗೆ ಏನಾಗುತ್ತದೆ ಎಂದು ಹೇಳಲಿ ಬಿಡಿ.

ಶ್ರೀ ಎನ್ ಚಲುವರಾಯಸ್ವಾಮಿ : ಅದನ್ನು ಮಡುತ್ತೇವೆಂದು ಹೇಳಿಬಿಡಿ ಅಷ್ಟೇ.

ಅಧ್ಯಕ್ಷರು:- ಮಾಡುತ್ತೇವೆ, ಬಿಡ್ರಿ. ಮಾನ್ಯ ರಾಯರೆಡ್ಡಿಯವರೇ ಈಗ ತಾವು ಹೇಳಿ,

ಸಂಬಂದಿಸಿದ ಪ್ರಸ್ತಾವ

5. ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆ

ಶ್ರೀ ಬಸವರಾಜ ರಾಯರೆಡ್ಡಿ (ಯಲಬುರ್ಗಾ) : ಮಾನ್ಯ ಅಧ್ಯಕ್ಷರೆ, "2013ರ ಜೂನ್ 3 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕಾದ ವಂದನೆಗಳನ್ನು ಸಮರ್ಪಿಸಲು ಈ ಸದನದ ಅಪ್ಪಣೆಯನ್ನು ಕೋರುತ್ತೇನೆ."

ಅಧ್ಯಕ್ಷರು :- ಶ್ರೀ ಪ್ರಮೋದ್ ಮಧ್ವರಾಜ್‌ರವರು ಅನುಮೋದಿಸಿ.

ಶ್ರೀ ಪ್ರಮೋದ್ ಮಧ್ವರಾಜ್ (ಉಡುಪಿ) : ಮಾನ್ಯ ಅಧ್ಯಕ್ಷರೆ, ಬಸವರಾಜ್ ರಾಯರೆಡ್ಡಿಯವರು ಮಂಡಿಸಿದಂಥ ಸೂಚನೆಯನ್ನು ನಾನು ಅನುಮೋದಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ :- ನಿಯಮ 69ರ ಅಡಿಯಲ್ಲಿ ಈಗ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಅವಕಾಶ. . . .

(ಗೊಂದಲ)

ಅಧ್ಯಕ್ಷರು :- ಎಲ್ಲರೂ ಒಂದೇ ಸಾರಿ ನಿಂತರೆ ಯಾರ ಮಾತು ಕೇಳುವುದು. ನಿಯಮ 69ರ ವಿಷಯಕ್ಕೆ ಬರುತ್ತೇನೆ. ಈಗ ಮಾನ್ಯ ವಿರೋಧ ಪಕ್ಷದ ನಾಯಕರೇ ಹೇಳಿ. ವಿಶ್ವೇಶ್ವರ ಹೆಗಡೆಯವರೆ ನಿಮ್ಮ ವಿಷಯಕ್ಕೆ next ಬರುತ್ತೇನೆ, ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ, ಕಾಗೇರಿ :- ಮಾನ್ಯ ಅಧ್ಯಕ್ಷರೆ, ಈ ವಿಷಯ ಆದನಂತರ ನಾವು ಪ್ರಸ್ತಾಪ ಮಾಡುವುದಕ್ಕೆ ಅವಕಾಶ ಕೊಡಬೇಕು.

ಅಧ್ಯಕ್ಷರು :- ಖಂಡಿತ.